**OS No. 128/2024**
**PW-1**

**<u>ದಿನಾಂಕಃ 10-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**
**<u>ಪಾಟೀ ಸವಾಲು ಶ್ರೀ. V.G.C.ಪ್ರತಿವಾದಿ ಪರ ವಕೀಲರಿಂದ</u>**

ನನ್ನ ತಂದೆಯ ಕುಟುಂಬಕ್ಕೆ 13 ಎಕರೆ ಜಮೀನು ಇದೆ. ಈ ಜಮೀನುಗಳು ನನ್ನ ತಂದೆ ಮತ್ತು ನನ್ನಅಣ್ಣ ತಮ್ಮಂದಿರು ಸೇರಿ ಖರೀದಿಸಿರುವ ಜಮೀನುಗಳು ಎಂದರೆ ಸರಿ. ನನ್ನ ತಂದೆಯವರು ಮರಣ ಹೊಂದಿರುತ್ತಾರೆ. ಪ್ರತಿವಾದಿ ನಂ.2 ಮತ್ತು ಮೃತ ಪ್ರತಿವಾದಿ ನಂ.3 ಶಿವಾನಂದ ರವರು ನನ್ನ ತಮ್ಮಂದಿರು. ನನ್ನ ತಮ್ಮ ಶಿವಾನಂದ ರವರು 2020 ರಲ್ಲಿ ಮರಣ ಹೊಂದಿದ್ದಾರೆ. ನನ್ನ ತಂದೆ ಜೀವಂತ ಇದ್ದಾಗ 2018 ರಲ್ಲಿ ನಮ್ಮ ಕುಟುಂಬದಲ್ಲಿ ಒಂದು ವಾಟ್ನಿ ಮಾಡಿಕೊಂಡಿದ್ದರು ಎಂದರೆ ನನಗೆ ಗೊತಿಲ್ಲ. ನನ್ನ ಶಿವಾನಂದ ರವರು ಮರಣ ಹೊಂದಿದ ನಂತರ ಆರು ತಿಂಗಳಲ್ಲಿ ನನ್ನ ತಂದೆಯವರು ಮರಣ ಹೊಂದಿರುತ್ತಾರೆ.

ವಾರಿ ಹೊಲ ಎರಡು ಎಕರೆ, ನೀಲ ಗಿಡದ ಹೊಲ ಮೂರು ಎಕರೆ ಮತ್ತು ಮಡ್ಡಿ ಹೊಲ ಎರಡು ಎಕರೆ ಜಮೀನುಗಳು ಪ್ರತಿವಾದಿ ನಂ.2 ರವರ ಪಾಲಿಗೆ ಹೊಗಿದೆ ಎಂದು ವಾಟ್ನಿಯಲ್ಲಿ ಬರೆಯಲಾಗಿದೆ ಎಂದರೆ ಸರಿ. ಹಳ್ಳದ ಹೊಲ ಆರು ಎಕರೆ ಮತ್ತು ಶಾಲಾ ಸಂಸ್ಥೆ ಇರುವ 17 ಗುಂಟೆ ಜಮೀನು ಶಿವಾನಂದ ರವರ ಪಾಲಿಗೆ ಹೊಗಿದೆ ಎಂದು ವಾಟ್ನಿಯಲ್ಲಿ ಬರೆಯಲಾಗಿದೆ ಎಂದರೆ ಸರಿ. ಹೀಗೆ ವಾಟ್ನಿಯಾದ ನಂತರ ಶಿವಾನಂದ ರವರು ತನ್ನ ಜೀವಿತಾವಧಿಯವರೆಗೆ ಶಾಲೆಯನ್ನು ನಡೆಸಿಕೊಂಡು ಬಂದಿದ್ದರು ಎಂದರೆ ಸರಿ. ಶಿವಾನಂದ ರವರ ಮರಣ ನಂತರ ಆತನ ಹೆಂಡತಿ ಮತ್ತು ಮಕ್ಕಳಾದ ಪ್ರತಿವಾದಿ ನಂ.3 ಎ ರಿಂದ 3 ಡಿ ರವರು ಸದರಿ ಆರು ಎಕರೆ ಜಮೀನನ್ನು ಸಾಗುವಳಿ ಮಾಡಿಕೊಂಡು ಶಾಲೆಯನ್ನು

ನಡೆಸಿಕೊಂಡು ಬಂದಿದ್ದಾರೆ ಎಂದರೆ ಸರಿ.

ನಾನು ಸಿಂದಗಿ ಕಿರಿಯ ಶ್ರೇಣಿ ಸಿವ್ಹಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ನಂ.298/2020 ರಂತೆ ವಾಟ್ನಿ ದಾವಾೆಯನ್ನು ಈ ದಾವೆಯ ದಾವಾ ಆಸ್ತಿಗೆ ಸಂಬಂಧಿಸಿ ಈ ದಾವೆಯ ಪಕ್ಷಗಾರರ ವಿರುದ್ದ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ದಾವೆಯು ದಿ. 09-02-2024 ರಂದು ವಜಾಗೊಂಡಿದೆ ಎಂದರೆ ಸರಿ. ಸದರಿ ದಾವೆಯನ್ನು ಪುನಃ ವಿಚಾರಣೆ ಮಾಡುವಂತೆ ನಾನು ಆ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿಲ್ಲ. ಸದರಿ ದಾವೆಯು ವಜಾಗೊಂಡಿದ್ದರಿಂದ ಈ ದಾವೆಯನ್ನು ನಾನು ಸಲ್ಲಿಸಲುಬರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ತಮ್ಮನಾದ ಸಿದ್ರಾಮಪ್ಪ ರವರು ಈ ದಾವೆಯ ಪ್ರತಿವಾದಿ ನಂ.3 ಎ ರವರ ವಿರುದ್ಧ ಶಾಲಾ ಸಂಸ್ಥೆ ಇರುವ 17 ಗುಂಟೆಗೆ ಸಂಬಂಧಿಸಿ ಅಸಲು ದಾವಾ ನಂ.223/2020 ನ್ನು ಮನಾಯಿ ಆದೇಶ ಕೇಳಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯು ದಿ.08-08-2024 ರಂದು ವಜಾಗೊಂಡಿದೆ ಎಂದರೆ ಸರಿ. ಈ ದಾವೆಯನ್ನು ಸಲ್ಲಿಸಲು ನಾನು ಮತ್ತು ನನ್ನ ತಮ್ಮನಾದ ಪ್ರತಿವಾದಿ ನಂ.2 ರವರು ಸೇರಿ ವಕೀಲರಿಗೆ ಮಾಹಿತಿಯನ್ನು ಕೊಟಿಟದ್ದೇವು ಎಂದರೆ ಸರಿ.

**<u>ಮುಂದುವರಿದ ಪಾಟೀ ಸವಾಲು ಪ್ರತಿವಾದಿಯ ಪರ ವಕೀಲರು ಕಾಲವಕಾಶ ಕೇಳಿದ್ದು, ಕಾಲವಕಾಶ ನೀಡಿ ಮುಂದೂಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿ ರುವರು.

ಪ್ರಧಾನ ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.
ಸಿಂದಗಿ